ಕರ್ನಾಟಕ ವಿಧಾನಸಭೆ

ಬುಧವಾರ 11ನೇ ಮಾರ್ಚ್ 1998ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್) ರವರು ಪೀಠವನ್ನು ಅಲಂಕರಿಸಿದ್ದರು.

(1) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹಿರೇಕೆರೂರು ತಾಲ್ಲೂಕಿನಲ್ಲಿ ತೆಗೆದುಕೊಳ್ಳಲಿರುವ ಡಾಂಬರ್ ಕೆಲಸ

16 (111)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿ 1997-98ನೇ ಸಾಲಿನ ಅಂತ್ಯದೊಳಗೆ ಯಾವ ಯಾವ ಯೋಜನೆಗಳ ಅಡಿಯಲ್ಲಿ ಡಾಂಬರ್ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿ 1997-98ನೇ ಸಾಲಿನ ಅಂತ್ಯದೊಳಗೆ ವಿವಿಧ ಯೋಜನೆಗಳಡಿಯಲ್ಲಿ ತೆಗೆದುಕೊಳ್ಳಲಾದ ಡಾಂಬರ್ ಕೆಲಸದ ವಿವರ ಈ ಕೆಳಗಿನಂತಿದೆ.

ಅ. ಸಂ.	ಲೆಕ್ಕಶೀರ್ಷಿಕೆ : ಯೋಜನೆ	ಗುರಿ		ಸಾಧನೆ	
		ಭೌತಿಕ (ಕಿ.ಮೀ. ಗಳಲ್ಲಿ)	ಆರ್ಥಿಕ (ರೂ. ಲಕ್ಷಗಳಲ್ಲಿ)	ಭೌತಿಕ (ಕಿ.ಮೀ. ಗಳಲ್ಲಿ)	ಆರ್ಥಿಕ (ರೂ. ಲಕ್ಷಗಳಲ್ಲಿ)
1	2	3	4	5	6
1.	3054:ಗ್ರಾಮ ಪರಿಮಿತಿಯಲ್ಲಿ ಡಾಂಬರೀಕರಣ	1.50	3.70	-	0.57

2.	5054: ರಸ್ತೆ ಡಾಂಬರ್ ಮಾಡುವುದು (ಬಜೆಟೆಡ್ ರಸ್ತೆ)	1.60	4.50	0.40	2.31
3.	2225: ಹರಿಜನವಾಡಾ ರಸ್ತೆ	0.50	1.51	-	-
4.	3054: ಯೋಜನೇತರ	6.50	12.36	2.50	5.30
5.	ಎಂ.ಎ.ಡಿ.ಬಿ (ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆ)	16.00	36.87	2.00	4.30

ಶ್ರೀ ಯು.ಬಿ.ಬಣಕಾರ್: ಸಭಾಧ್ಯಕ್ಷರೇ, ಈ ಜಿಲ್ಲಾ ಪಂಚಾಯಿತಿ ಪರಿಮಿತಿಯಲ್ಲಿ ಬರುವ ರಸ್ತೆಗಳ ಪರಿಸ್ಥಿತಿಯಂತೂ ಹೇಳತೀರದಂತಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಈ ವರ್ಷ ಯೋಜನೆ ಹಾಗೂ ಯೋಜನೇತರದಲ್ಲಿ ಸುಮಾರು 10 ಕಿಲೋಮೀಟರ್‌ಗಳಷ್ಟು ಡಾಂಬರ್ ರಸ್ತೆಯನ್ನು ಮಾಡಬೇಕಾಗಿತ್ತು. ಆದರೆ ವರ್ಷ ಮುಗಿಯುವುದಕ್ಕೆ ಕೇವಲ 15ದಿವಸಗಳು ಬಾಕಿ ಇದೆ. ಇದುವರೆಗೆ ಕೇವಲ ಮೂರು ಕಿಲೋಮೀಟರ್ ಮಾತ್ರ ಡಾಂಬರ್ ರಸ್ತೆ ಮಾಡಲಾಗಿದೆ. ಸಭಾಧ್ಯಕ್ಷರೆ, ಪ್ರತಿವರ್ಷ ಏನಾಗುತ್ತಿದೆ ಎಂದರೆ ಹತ್ತು ಕಿಲೋಮೀಟರ್ ಡಾಂಬರ್ ರಸ್ತೆಯನ್ನು ನಿಗದಿ ಮಾಡಿದ್ದರೂ ಸಹ ಮೂರು ನಾಲ್ಕು ಕಿಲೋಮೀಟರ್ ಮುಗಿಸುವುದಕ್ಕೆ ಜಿಲ್ಲಾ ಪಂಚಾಯಿತಿಯಿಂದ ಆಗುತ್ತಿಲ್ಲ. ಆದ್ದರಿಂದ ಪ್ರತಿವರ್ಷ ನಿಗದಿಮಾಡಿದಂಥ ಹತ್ತು ಕಿಲೋಮೀಟರ್ ರಸ್ತೆಯನ್ನು ಮುಗಿಸಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ 16 ಕಿಲೋಮೀಟರ್ ರಸ್ತೆಗೆ 36 ಲಕ್ಷ ರೂಪಾಯಿಗಳನ್ನು ನಾನು ಜಿಲ್ಲಾ ಪಂಚಾಯಿತಿಗೆ ನಿಗದಿ ಮಾಡಿದ್ದೆ. ಆದರೆ ಇವತ್ತಿನವರೆಗೂ ಕೇವಲ ಎರಡು ಕಿಲೋಮೀಟರ್ ರಸ್ತೆ ಮಾತ್ರ ಮಾಡಲಾಗಿದೆ. ಆದ್ದರಿಂದ ಇಂಜಿನಿಯರಿಂಗ್ ವಿಭಾಗವನ್ನು ತೀವ್ರಗೊಳಿಸಿ ಯೋಜನೆಯಲ್ಲಿ ನಿಗದಿಪಡಿಸಿದಂಥ ಕೆಲಸಗಳನ್ನು ನಿಗದಿತ ಅವಧಿಯಲ್ಲಿ ಮುಗಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯಿತಿ ರಸ್ತೆಗಳ ಪರಿಸ್ಥಿತಿ ಚೆನ್ನಾಗಿಲ್ಲ ಎಂಬುದು ಎಲ್ಲರ ಗಮನಕ್ಕೂ ಬಂದಿದೆ. ಆದರೆ ಅನುದಾನ ಲಭ್ಯತೆಗೆ ಅನುಗುಣವಾದಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅವರು ಈಗಾಗಲೇ ಹೇಳಿದಂತೆ ಮಲೆನಾಡು ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಎರಡು ಕಿಲೊಮೀಟರ್‌ನಷ್ಟು ರಸ್ತೆಯ ಡಾಂಬರೀಕರಣ ಆಗಿದೆ. ಇನ್ನೂ ಮೂರು ಕಿಲೋಮೀಟರ್‌ಗೆ ಸಂಬಂಧಪಟ್ಟಂತೆ ಟೆಂಡರ್ ಕರೆಯಲಾಗಿದೆ. ಈಗಾಗಲೇ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಈ ಬಾಬಿನಲ್ಲಿ ಖರ್ಚು ಮಾಡಿದ್ದೇವೆ. ಉಳಿದಿರತಕ್ಕಂಥ ಹಣವನ್ನು ಆರ್ಥಿಕ ವರ್ಷದಲ್ಲಿ ಲಭ್ಯತೆ ಬಂದ ತಕ್ಷಣ ಆ ಮೂರು

ಕಿಲೋಮೀಟರ್ ರಸ್ತೆಯ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದೇ ರೀತಿ ಶೀರ್ಷಿಕೆ 3054ರ ಕೆಳಗೆ ಶೀರ್ಷಿಕೆ 5054 ಕೆಳಗೆ, ಶೀರ್ಷಿಕೆ 2225ರ ಕೆಳಗೆ ಬೇರೆ ಬೇರೆ ಸಂದರ್ಭಗಳಲ್ಲಿ ಸುಮಾರು ಆರೆಂಟು ಕಿಲೋಮೀಟರ್‌ಗಿಂತ ಹೆಚ್ಚು ಡಾಂಬರೀಕರಣವನ್ನು ಆಯಾ ಶೀರ್ಷಿಕೆಗಳ ಕೆಳಗೆ ಕೆಲಸ ಮಾಡಿದ್ದೇವೆ. ಮಾರ್ಚ್ 1998ರೊಳಗೆ ಅನೇಕ ಕಡೆ, ಉದಾಹರಣೆಗೆ 5054ರ ಕೆಳಗೆ ಈಗಾಗಲೇ ಉಳಿದ 1.20 ಕಿಲೋಮೀಟರ್‌ನಷ್ಟು ರಸ್ತೆ ಕೆಲಸವನ್ನು ಮಾಡಿಕೊಡುತ್ತೇವೆ. ಹಾಗೆಯೇ ಗ್ರಾಮದ ಪರಿಮಿತಿಯಲ್ಲಿ ಈಗಾಗಲೇ ಒಂದೂವರೆ ಕಿಲೋಮೀಟರ್ ಆಗಿದೆ. 1998ರ ಮಾರ್ಚ್‌ಯೊಳಗೆ ಉಳಿದ ಎಲ್ಲಾ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ. ಹರಿಜನವಾಡ ರಸ್ತೆಯಲ್ಲಿ ಈಗಾಗಲೇ ಅರ್ಧ ಕಿಲೋಮೀಟರ್ ರಸ್ತೆ ಮಾಡಿದ್ದೇವೆ. ಉಳಿದಿರತಕ್ಕದ್ದನ್ನು ಮಾರ್ಚ್ 1998ರೊಳಗೆ ಮುಗಿಸುತ್ತೇವೆ. ಹಾಗೆಯೇ ಯೋಜನೇತರ ಅಡಿಯಲ್ಲಿ ಆರೂವರೆ ಕಿಲೋಮೀಟರ್ ಡಾಂಬರೀಕರಣ ಈಗಾಗಲೇ ಯೋಚಿಸಲಾಗಿದ್ದು ಅದರಲ್ಲಿ ಎರಡೂವರೆ ಕಿಲೋಮೀಟರ್ ರಸ್ತೆ ಮುಗಿದಿದೆ. ಇನ್ನು ನಾಲ್ಕು ಕಿಲೋಮೀಟರ್ ರಸ್ತೆಯನ್ನು ಮಾರ್ಚ್ 1998ರೊಳಗೆ ಮುಗಿಸಿಕೊಡುತ್ತೇವೆ.

ಶ್ರೀ ಯು.ಬಿ.ಬಣಕಾರ್: ಈ ವರ್ಷ ದಯವಿಟ್ಟು ಪ್ರತಿಯೊಂದು ತಾಲ್ಲೂಕಿಗೂ ಕನಿಷ್ಠ 15 ಕಿಲೋಮೀಟರ್ ಡಾಂಬರ್ ರಸ್ತೆಯನ್ನಾದರೂ ತೆಗೆದುಕೊಳ್ಳುವುದಕ್ಕೆ ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ವರ್ಷ ಬೇಡ. ಮುಂದಿನ ವರ್ಷ ತೆಗೆದುಕೊಳ್ಳಿ. ಏಕೆಂದರೆ ಎಲೆಕ್ಷನ್‌ಗೆ ಹತ್ತಿರ ಇರುತ್ತದೆ. ಈಗಲೇ ತೆಗೆದುಕೊಂಡರೆ ಜನ ಮರೆತುಬಿಡುತ್ತಾರೆ. ಮುಂದಿನ ವರ್ಷಕ್ಕೆ ಅಡ್ಜಸ್ಟ್ ಮಾಡಿಕೊಡಿ ಅವರಿಗೆ.

ಮಂಗಳೂರು ನಗರದಲ್ಲಿ ಮಲೇರಿಯಾ ನಿಯಂತ್ರಣ ಘಟಕ

17 (214)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಗಳೂರು ನಗರದಲ್ಲಿ ಮಲೇರಿಯಾ ಪೀಡಿತರಾಗಿ ಜನರು ನರಳುತ್ತಿದ್ದು, ಹಲವು ಸಾವುನೋವುಗಳಾಗಿದ್ದರೂ ಪೂರ್ಣ ಪ್ರಮಾಣದ ಮಲೇರಿಯ ನಿಯಂತ್ರಣ ಘಟಕವನ್ನು ಮಂಗಳೂರಿಗೆ ಕೊಡದಿರಲು ಕಾರಣವೇನು?

ಆ. ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು?

ಇ. ಮಂಗಳೂರಿನ ಪೂರ್ಣ ಪ್ರಮಾಣದ ಮಲೇರಿಯ ನಿಯಂತ್ರಣ ಘಟಕಕ್ಕೆ